<u>ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸವಣೂರು.</u>

<u>ಸಿ.ಸಿ ಸಂಖ್ಯೆ: **323/2016**</u>

ಪಿಡಬ್ಲ್ಯೂ: 02 ಸಿಡಬ್ಲ್ಯೂ : 04
ದಿನಾಂಕ: 20-07-2026
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | - ಶೋಭಾ ಮರಡೂರ |
| ತಂದೆ/ಗಂಡನ ಹೆಸರು | - ಸುರೇಶ ಮರಡೂರು |
| ವಯಸ್ಸು | - 47 ವರ್ಷ |
| ಉದ್ಯೋಗ | - ವ್ಯವಸಾಯ |
| ವಾಸ ಸ್ಥಳ | - ಹೆಸರೂರು |

<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ ರವರಿಂದ.</u>

ಚಾಸಾ-1 ನನ್ನ ಗಂಡ. ಚಾಸಾ-5, 6 ನನ್ನ ಮಕ್ಕಳು. ಚಾಸಾ-7 ರಿಂದ 10 ಇವರ ಪರಿಚಯ ನನಗೆ ಇದೆ. ಆರೋಪಿತರ ಪರಿಚಯ ಇದೆ. ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿಲ್ಲ. ನನಗೆ ಹುಷಾರಿಲ್ಲದೇ ಇದ್ದ ಕಾರಣ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ನ್ಯಾಯಾಲಯದ ಮುಂದಿರುವ ಮು.ಮಾ.ಗಳನ್ನು ನೋಡಿ ಗುರುತಿಸಿರುವುದಿಲ್ಲ.

**(**ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಲಾಯಿತು.**)**

<u>ಪಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ.</u>

ನಾನು ಮೇಲಿನ ವಿಳಾಸದಲ್ಲಿ ................. ಕೊಡುತ್ತ ಬಂದದ್ದು ಇರುತ್ತದೆ. ವರ್ ಮೇಲೇ ಓದಿ ಹೇಳಿದ ರೀತಿಯಲ್ಲಿ ದಿನಾಂಕ 01-07-2015 ರಂದು ನೀವು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೀರಿ ಎಂದರೆ ಸರಿ ಅಲ್ಲ. ಸದರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಮು.ಮಾ.ಗಳನ್ನು ನಿಮಗೆ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ ಅಲ್ಲ.

<u>ಪಾಟೀ ಸವಾಲುಃ ಆರೋಪಿತರು ವಕೀಲರ ಮುಖಾಂತರ ಹಾಜರಾಗದೇ ತಾವುಗಳೇ ಕೇಸನ್ನು ನಡೆಸುತ್ತೇವೆ ಎಂದು ನುಡಿದಿರುತ್ತಾರೆ.</u>

ರಾಜಕೀಯ ಒತ್ತಡವಾಗಿ ನಿಮ್ಮ ಗಂಡ ದೂರನ್ನು ನೀಡಿದ್ದಾರೆ ಎಂದರೆ ಸರಿ ಅಲ್ಲ. ಆಸ್ತಿ ಸಲುವಾಗಿ ರಾಜಕಾರಣಿಗಳು ನಿಮ್ಮನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದರೆ ಸರಿ ಅಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿ ಅಲ್ಲ. ಶೃತಿ ಕೆಂಚಣ್ಣನವರ ಹಣವನ್ನು ಕೊಳ್ಳೆ ಹೊಡೆಯುವ ಹೊಡೆಯುವ ಸಲುವಾಗಿ ರಾಜಕೀಯ ವ್ಯಕ್ತಿಗಳ ಒತ್ತಡದ ಮೇರೆಗೆ ಸುಳ್ಳು ಫಿರ್ಯಾದಿ ಸಲ್ಲಿಸಿದ್ದೀರಿ ಎಂದರೆ ಸರಿ ಅಲ್ಲ. ಆಸ್ತಿ ಸಲುವಾಗಿ ಓಎಸ್ ನಂ.115/2013 ಕಿತ್ತು ಹಾಕಿ ನೀವು ಸುಳ್ಳು ಪ್ರಕರಣಗಳನ್ನು ನೀವು ಆರೋಪಿತರ ವಿರುದ್ಧ ದಾಖಲು ಮಾಡಿದ್ದೀರಿ ಎಂದರೆ ಸರಿ ಅಲ್ಲ.

<u>ಮರು ವಿಚಾರಣೆಃ</u> ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.